ಶ್ರೀ ಯು.ಬಿ. ಬಣಕಾರ್ : ನೀವು ವಾರ್ಷಿಕ ಗುರಿಯನ್ನು ಪ್ರತಿವರ್ಷವೂ ನಿಗದಿ ಮಾಡುತ್ತೀರಿ. ಆದ್ದರಿಂದ ವಾರ್ಷಿಕ ಗುರಿಯನ್ನು ಆಯಾ ವರ್ಷವೇ ಸಾಧಿಸಬೇಕೆಂದು ತಾವು ಮಾಡಬೇಕಾಗುತ್ತದೆ. ಏಕೆಂದರೆ ಕೆಲವೊಂದು ತಾಲ್ಲೂಕುಗಳಲ್ಲಿ ಐದಾರುವರ್ಷಗಳಿಂದ ಆ ಯೋಜನೆಯು ಬರುತ್ತಾ ಇರುತ್ತದೆ. ಹಾಗೆಯೇ ನೀರು ಪೂರೈಕೆ ಯೋಜನೆಗಳಿಗೆ ನಿರ್ವಹಣಾ ವೆಚ್ಚವನ್ನು ಮಾಡುತ್ತಿದ್ದೀರಿ. ಅದರ ಬಗ್ಗೆ ಹೇಳಬೇಕೆಂದರೆ ನಮ್ಮ ಹಾವೇರಿ ಜಿಲ್ಲೆಗೆ 41ಲಕ್ಷ ರೂ.ಗಳನ್ನು ಕೊಟ್ಟಿದ್ದರೆ ಅಲ್ಲಿ ಖರ್ಚು ಮಾಡಿರುವುದು 63ಲಕ್ಷಗಳು. ಆದ್ದರಿಂದ ಯೋಜನೆಗಳು ಜಾಸ್ತಿಯಾಗುತ್ತಿರುವುದರಿಂದ ನಿರ್ವಹಣಾ ವೆಚ್ಚವನ್ನು ಕೂಡ ಜಾಸ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಹೀಗೆ ಹೆಚ್ಚುವರಿಯಾದಂಥ ಸಂದರ್ಭದಲ್ಲಿ ಗುರಿಯೆನ್ನು ಏನು ಇಟ್ಟುಕೊಂಡಿರುತ್ತೇನೆ. ಆದರೆ ವಾತಾವರಣದಲ್ಲಿ ಆದಂಥ ಬದಲಾವಣೆಗಳು ಋತುಮಾನಗಳಲ್ಲಿ ಆದಂಥ ವ್ಯತ್ಯಾಸಗಳು, ಇವುಗಳನ್ನು ಅನುಸರಿಸಿ ಅನೇಕ ಸಂದರ್ಭಗಳಲ್ಲಿ ಕುಡಿಯುವ ನೀರಿಗೆ ಹೆಚ್ಚು ಆದ್ಯತೆಯನ್ನು ಕೊಟ್ಟು ಹೆಚ್ಚು ಖರ್ಚು ಮಾಡತಕ್ಕಂಥ ಸಂದರ್ಭಗಳು ಕೂಡ ಇರುತ್ತವೆ. ತಾವುಗಳು ಹೇಳಿದಂತೆ ನಿರ್ವಹಣಾ ವೆಚ್ಚವನ್ನು ಅವರೇ ನೋಡಿಕೊಳ್ಳಬೇಕಾಗುತ್ತದೆ. ಅದನ್ನು ಕ್ರಿಯಾಯೋಜನೆಯಲ್ಲಿ ಮಾಡಿಕೊಳ್ಳಬೇಕು. ಒಂದು ವೇಳೆ ನಿರ್ವಹಣಾ ವೆಚ್ಚದಲ್ಲಿ ಹಣವು ಕಡಿಮೆ ಬಿದ್ದಾಗಲೂ ಕೂಡ ರಾಜ್ಯ ಸರಕಾರವು ಅವರಿಗೆ ಹೆಚ್ಚುವರಿ ಹಣವನ್ನು ಒದಗಿಸಿಕೊಡತಕ್ಕಂಥ ಉದಾಹರಣೆ ಕೂಡ ಇದೆ. ತಾವು ಹೇಳಿದಂತೆ ಹೆಚ್ಚು ಕಾಮಗಾರಿಗಳನ್ನು ಅನುದಾನ ಕೊಡದೇ ಕೈಗೊಳ್ಳಬಾರದು ಎಂದು ಹೇಳಿ, ಸುತ್ತೋಲೆಯನ್ನು ಕಳುಹಿಸಿಕೊಟ್ಟು ಸುಮಾರು ಎರಡು ವರ್ಷಗಳು ಆದುವು. ಅದರಲ್ಲಿ ಕಿರುನೀರು ಯೋಜನೆಗೆ ಶೇಕಡ 40 ಭಾಗವನ್ನು ಅನುದಾನದಲ್ಲಿ ಕೊಡದಿದ್ದರೆ ಕಾರ್ಯಕ್ರಮವನ್ನು ಹಾಕಿಕೊಳ್ಳಬಾರದು, ಒಂದು ವರ್ಷದಲ್ಲಿ ಮುಕ್ತಾಯಗೊಳಿಸಬೇಕೆಂದು ಹೇಳಿದ್ದೇವೆ. ಹಾಗೆಯೇ ಕುಡಿಯುವ ನೀರಿನ ಯೋಜನೆಯನ್ನು ಪೈಪ್‌ಲೈನ್‌ಗಳ ಮೂಲಕ ಮಾಡತಕ್ಕಂಥಾದ್ದು, ನಳದ ಯೋಜನೆಗಳು ಇದ್ದರೆ, ಅದನ್ನು ಎರಡು ವರ್ಷಗಳಲ್ಲಿ ಮುಗಿಸಿಯೇ ತೀರಬೇಕು. ಶೇಕಡಾ 40 ಭಾಗವನ್ನು ಅನುದಾನದಲ್ಲಿ ಒದಗಿಸಿಕೊಡಲೇಬೇಕೆಂಬ ಮಾತನ್ನು ಕೂಡ ಹೇಳಿದ್ದೇವೆ. ಆದರೆ ಕೆಲವು ಸಲ ಶಾಸಕರು ಹೆಚ್ಚು ಪ್ರಭಾವ ಬೀರಿದಾಗ, ಸಾರ್ವಜನಿಕರು ಹೆಚ್ಚು ಒತ್ತಡವನ್ನು ತಂದಾಗ, ಕೆಲವು ಇಂಥ ವ್ಯತ್ಯಾಸಗಳು ಆಗಿ ಅನೇಕ ಯೋಜನೆಗಳು ಮುಂದುವರಿದಂಥ ಕಾಮಗಾರಿಗಳು ಕೂಡ ಆಗಿದ್ದಾವೆ. ಆ ಅನಿಷ್ಠ ಪದ್ಧತಿಯನ್ನು ಕೈಬಿಡಬೇಕೆಂಬ ಸುತ್ತೋಲೆಯನ್ನು ಕೂಡ ನಾವು ಜಾರಿಗೆ ಕೊಟ್ಟಿದ್ದೇವೆ.

ಅಧ್ಯಕ್ಷರು : ಶ್ರೀ ಬಿ. ರಾಮು, ಶ್ರೀ ಜಗದೀಶ್ ಶೆಟ್ಟರ್, ಶ್ರೀ ಬಸವನಗೌಡ ಪಾಟೀಲ್, ಇಲ್ಲಿಗೆ ಪ್ರಶ್ನೋತ್ತರ ವೇಳೆಯು ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ, ಈ ದಿನದ ಲಿಖಿತ ಮೂಲಕ ಉತ್ತರಿಸುವ 24ನೇ ಪಟ್ಟಿಯಲ್ಲಿನ ಒಟ್ಟು 106 ಪ್ರಶ್ನೆಗಳ ಪೈಕಿ 60 ಪ್ರಶ್ನೆಗಳಿಗೆ ಉತ್ತರವನ್ನು ಸದನದ ಮುಂದಿಡುತ್ತಿದ್ದೇನೆ. ದಿನಾಂಕ 30ನೇ ಏಪ್ರಿಲ್ 1998ರಂದು ಪ್ರಶ್ನೋತ್ತರ ವೇಳೆ ನಡೆಯದ ಕಾರಣ 21ನೇ ಪಟ್ಟಿಯಲ್ಲಿನ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 9 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪೈಕಿ 51 ಪ್ರಶ್ನೆಗಳ ಪೈಕಿ 33 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತು 4ನೇ ಮೇ 1998ರ 22ನೇ ಪಟ್ಟಿಯಲ್ಲಿ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ, 3 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ, 83 ಪ್ರಶ್ನೆಗಳ ಪೈಕಿ 29 ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತ 5ನೇ ಮೇ, 1998ರ ದಿನಾಂಕದ 23ನೇ ಪಟ್ಟಿಯಲ್ಲಿನ ಚುಕ್ಕೆ ಗುರುತಿನ 15 ಪ್ರಶ್ನೆಗಳ ಪೈಕಿ 2 ಪ್ರಶ್ನೆಗಳಿಗೆ ಉತ್ತರಗಳನ್ನು ಹಾಗೂ ಲಿಖಿತ ಮೂಲಕ ಉತ್ತರಿಸುವ 117 ಪ್ರಶ್ನೆ ಪೈಕಿ 10 ಪ್ರಶ್ನೆಗಳಿಗೆ ಉತ್ತರಗಳನ್ನು ತಮ್ಮ ಪರವಾನಿಗೆ ಪಡೆದು ಸಭೆಯ ಮುಂದೆ ಮಂಡಿಸುತ್ತೇನೆ.

ದಿನಾಂಕ 6.5.1998 ರ ಚುಕ್ಕೆ ಗುರುತಿಲ್ಲದ ಪ್ರಶ್ನೋತ್ತರಗಳು.

ಪತಿ - ಪತ್ನಿ ಶಿಕ್ಷಕರ ವರ್ಗಾವಣೆ.

1535 - ಶ್ರೀ ಅಶ್ವತ್ಥನಾರಾಯಣ ರೆಡ್ಡಿ (ವರ್ತೂರು) : ಮಾನ್ಯ ಪ್ರಾಥಮಿಕ, ಪ್ರೌಢ ಮತ್ತು ಉನ್ನತ ಶಿಕ್ಷಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶಿಕ್ಷಕರ ವರ್ಗಾವಣೆಯಲ್ಲಿ ಅಂತರ ಜಿಲ್ಲಾ ವರ್ಗಾವಣೆಯನ್ನು ಮಾಡದೆ ನಿಯಮಾವಳಿಗಳಿಂದ ಬಹಳಷ್ಟು ಶಿಕ್ಷಕರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಒಂದೇ ಕುಟುಂಬದ ದಂಪತಿಗಳು ಶಿಕ್ಷಕರಾಗಿದ್ದು ಅಥವಾ ಬೇರೆ ಬೇರೆ ಇಲಾಖೆಗಳಲ್ಲಿ ನೌಕರಿಯಲ್ಲಿದ್ದು, ದೂರದಲ್ಲಿರುವಾಗ ಇಂತಹ ಪರಿಸ್ಥಿತಿಯನ್ನು ವಿಶೇಷವಾಗಿ ನಿಯಮಾವಳಿಗಳನ್ನು ಸಡಿಲಿಸುವುದು ಸೂಕ್ತವಲ್ಲವೆ?*

ಇ) *ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ ನಿಯಮಾವಳಿಗಳನ್ನು ಬದಲಾಯಿಸಲು ಕ್ರಮ ಕೈಗೊಳ್ಳಲಾಗುವುದೆ?*

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ, ಪ್ರೌಢ ಹಾಗೂ ಉನ್ನತ ಶಿಕ್ಷಣ ಸಚಿವರು) :

ಅ) ಇಲ್ಲ.

ಆ) ಹಾಲಿ ಇರುವ ಮಾರ್ಗಸೂಚಿಗಳಲ್ಲಿ ಅವಕಾಶ ಕಲ್ಪಿಸಲಾಗಿದೆ.

ಇ) ಉದ್ಭವಿಸುವುದಿಲ್ಲ.

ನೇತ್ರ ಚಿಕಿತ್ಸೆ ಮಾಡಿದ ವೈದ್ಯರಿಗೆ ಅನುದಾನ.

1536 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಆರೋಗ್ಯ ಮಂತ್ರಿಗಳು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿರುವ ಕಣ್ಣಿನ ಆಸ್ಪತ್ರೆಗಳೆಷ್ಟು? (ಕಣ್ಣಿನ ಕೇಂದ್ರಗಳು) ನೇತ್ರ ಚಿಕಿತ್ಸಾಲಯಗಳೆಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು)*